DOC 4 T-P-2

Reg No B G 155 7 — 6 — 72

55th Year of Publication ‘Satyavadi’ daily, Mysore 4

In the State – The First
Golden Jubilee
Celebrated Paper
★
News Views, Dharmic
Moral Ethical Matters

# ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [ 2 ಪೈಸೆ

## ತಾಲ್ಲೂಕು ಕೇಂದ್ರಗಳಲ್ಲಿ ಕೋರ್ಟುಗಳ ರಚನೆ

### ಕಳ್ಳತನ

ತಿರುನೇಂದ್ರಂನಿಂದ ಬಂದಿರುವ ವರದಿಯಂತೆ, ಧೈರ್ಯಶಾಲಿ ಕಳ್ಳರು ಮುಖ್ಯಮಂತ್ರಿ ಶ್ರೀ ನೆಡ್ಡರ್‌ಮನೆಗೆ ನುಗ್ಗಿ ಟೇಬಲ್ ಮೇಲೆ ಇಡಲಾಗಿದ್ದ ಒಂದು ಟ್ರಾನ್ಸಿಸ್ಟರ್ ಮತ್ತು ನೂರೈದು ರೂ ತೆಗೆದುಕೊಂಡು ಪರಾರಿ ಆದರು. ಪೋಲೀಸು ನಾಯಿಗಳು ಹಾಗೂ ಬೆರಳು ಗುರುತಿನ ತಜ್ಞರುಗಳನ್ನು ಕರೆಯಲಾಗಿದೆ

★

### ಅಮೇರಿಕಕ್ಕೆ ಉಳಿತಾಯ

ಮಾಸ್ಕೋದಲ್ಲಿ ಅಧ್ಯಕ್ಷ ನಿಕ್ಸನ್ ಮತ್ತು ರಷ್ಯ ನಾಯಕರಲ್ಲಿ ಆದ ಅಣು ಆಯುಧ ಒಪ್ಪಂದದಿಂದ ಅಮೇರಿಕಾಕ್ಕೆ 650 ಮಿಲಿಯ ಡಾಲರು ಉಳಿತಾಯ ಆಗಿದೆ.

★

### ಮಹಿಳಾ ಧರ್ಮಾಯಿತರು

ಹದಿನೈದು ಮುಂದಿಯ ಸಶಸ್ತ್ರ ಮಹಿಳಾ ಧರ್ಮಾಯಿತರ ತಂಡವು ಡಾಗರುವಾದಲ್ಲಿ ಮನೆಯೊಂದರ ಮೇಲೆ ದಾಳಿ ಮಾಡಿ ಹತ್ತು ಸಾವಿರ ರೂ ಬೆಲೆ ಬಾಳುವ ಆಭರಣಗಳು ಹಾಗೂ ಬೆಲೆ ಬಾಳುವ ಪದಾರ್ಥಗಳನ್ನು ಅಪಹರಿಸಿಕೊಂಡು ಹೋದರೆಂದು ಪೂರ್ನಿಯಾದಿಂದ ವಾರ್ತೆ ಬಂದಿದೆ.

★

### ದೇವೇಗೌಡರ ಹೇಳಿಕೆ

ರಾಜ್ಯದಲ್ಲಿ ಲಂಚ, ಭ್ರಷ್ಟಾಚಾರ ನಿರ್ಮೂಲಗೊಳಿಸಬೇಕೆಂಬ ಸರ್ಕಾರದ ಯೋಚನೆಗೆ, 1956 ರಿಂದ ಅಧಿಕಾರ ಹೊಂದಿದ್ದವರ ಬಗೆಗೆ ನ್ಯಾಯಾಂಗ ತನಿಖೆ ನಡೆಯುವುದೆಂದೇ ಪರಿಹಾರವೆಂದು ಶಾಸನ ಸಭೆ ವಿರೋಧ ಪಕ್ಷದ ನಾಯಕ ಶ್ರೀ ಹೆಚ್. ಡಿ. ದೇವೇಗೌಡರು ತಿಳಿಸಿದರು.

★ ಲಿಬಿಯಾ ಪ್ರಪಂಚದಲ್ಲೆಲ್ಲ ಅತಿ ಹೆಚ್ಚಾಗಿ ಟೀ ಕುಡಿಯುವ ದೇಶವಾಗಿದೆ.

● 300 ಕನ್ನಡ ಟೈಪ್‌ರೈಟರುಗಳಿಗೆ ಸರ್ಕಾರ ಆರ್ಡರ್ ಇತ್ತಿದೆ.

### ಓವರ್‌ಡ್ರಾಫ್ಟ್ ತೀರ್ಪೆ

ರಿಸರ್ವ್ ಬ್ಯಾಂಕ್‌ಗೆ ಮೈಸೂರು ತೀರಿಸಬೇಕಾಗಿದ್ದ ರೂ. 71.5 ಕೋಟಿ ತೀರ್ವೆ ಆಗಿದೆ. ಇನ್ನು ಮುಂಪೆ ಓವರ್‌ಡ್ರಾಫ್ಟ್ ಪಡೆಯಬೇಕಾಗಿಲ್ಲ ಎಂದು ಹಣಕಾಸು ಮಂತ್ರಿ ಶ್ರೀ ಘೋರ್ಪಡೆಯವರು ಬೆಂಗಳೂರಿನಲ್ಲಿ ಪತ್ರಿಕೆಯವರಿಗೆ ತಿಳಿಸಿದರು.

●

### ಮುಖ್ಯ ಮಂತ್ರಿ ಮುಂದು

ಆಂಧ್ರ ಮಂತ್ರಿಗಳು, ಶಾಸಕರು ಸ್ವ ಇಚ್ಛೆಯಿಂದ ಹರಿಮಿತಿಗೆ ಮೀರಿದ ಉಳಿತಾಯ ಭೂಮಿಯನ್ನು ಘೋಷಿಸುವುದರಲ್ಲಿ ತಾನೇ ಮುಂದಾಗುವುದಾಗಿ ಮುಖ್ಯಮಂತ್ರಿ ಶ್ರೀ ನರಸಿಂಗರಾವ್‌ರು ಹೈದರಾಬಾದಿನಲ್ಲಿ ತಿಳಿಸಿದರು.

★

### ಪಂಚಾಯಿತಿ ಚುನಾವಣೆ

ಮೈಸೂರು ರಾಜ್ಯದಲ್ಲಿ ಪಂಚಾಯಿತಿ ಮತ್ತು ತಾಲ್ಲೂ ಅಭಿವೃದ್ಧಿ ಮಂಡಲಿಗಳ ಚುನಾವಣೆಯು ನವೆಂಬರ್ – ಡಿಸೆಂಬರ್ ನಲ್ಲಿ ನಡೆಯುವಂತೆ ಸರ್ಕಾರ ಅಜ್ಞೆ ಮಾಡಿದೆ.

★

### ಹಿಂಸಾಕೃತ್ಯ

ಶ್ರೀ ಲಂಕದಲ್ಲಿ ರಾಜ್ಯಾಂಗ ವಿರುದ್ಧ ತಮಿಳು ಸಂಯುಕ್ತ ರಂಗ ಚಳವಳ ಆರಂಭಿಸಿದ ನಂತರ ಹಿಂಸಾಕೃತ್ಯಗಳು ನಡೆಯುತ್ತಿವೆ.

★

### ಮಂಜಿನಲ್ಲಿ ಹೆಣ

ಡೆಹರಾಡೂನಿಂದ ಬಂದಿರುವ ವರದಿ ಪ್ರಕಾರ, ಘಾರವಾಲ ಹಿಮಾಲಯಗಳಲ್ಲಿನ ರೂಪಕುಂಡ ಹತ್ತಿರ ಮಂಜಿನಲ್ಲಿ ಮುನ್ನೂರಕ್ಕೂ ಹೆಚ್ಚು ದೇಹಗಳು ಹೂತು ಹೋಗಿವೆ.

### ಅದ್ಭುತ ಸಾಹಸ

ಬ್ರಾಡ್‌ಫರ್ಡ್— 15 ಮುಂದಿ ಕರಾಟೆ ನಿಪುಣರು, ತಮಗೆ ಇರಲು ಸ್ಥಳೀಯ ಪೌರಸಭೆ ಕೊಟ್ಟಿದ್ದ 100 ವರ್ಷ ಹಳೆಯದಾದ 6 ಕೊಠಡಿಗಳ ಮನೆಯನ್ನು ತಮ್ಮ ಕೈ, ಕಾಲು, ತಲೆಗಳಿಂದ ಗುದ್ದಿ ಒಡೆದರು, ಪೂರ್ತಾ ಕೆಡವಿದರು – ಒಂದು ಬೆಜಾಗಾಗಿ ಹೀಗೆ ಮಾಡಲಾಯಿತು – ದಾನಕಾರ್ಯಕ್ಕೆ ಹಣ ಶೇಖರಿಸಲು ಈ ಸಾಹಸ ಕಾರ್ಯ ನಡೆಸಿದ್ದರು.

★

### ದಿವ್ಯವಾಣಿ

ತಪ್ಪನ್ನು ಸರಿಯೆಂದು ಕಾಣಿಸುವ ಜನರಿಗೆ ಈ ದಿನಗಳಲ್ಲಿ ಕೇಳಿಕೆ ಹೆಚ್ಚಾಗಿದೆ.

— ಟೆರೇನ್ಸ್

### ಕೋರ್ಟುಗಳು

ಬೆಂಗಳೂರು– ಸಾರ್ವಜನಿಕರಿಗೆ ಹತ್ತಿರದಲ್ಲೆ ನ್ಯಾಯ ದೊರೆಯುವಂತೆ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲೂ ನ್ಯಾಯಸ್ಥಾನಗಳನ್ನು ಸ್ಥಾಪಿಸಲು ಸರಕಾರ ಯೋಚಿಸುತ್ತಿರುವುದಾಗಿ ನ್ಯಾಯಾಂಗ ಮಂತ್ರಿ ಶ್ರೀ ಡಿ.ಕೆ. ನಾಯಕರರು ತಿಕಾರಿಪುರದಲ್ಲಿ ತಿಳಿಸಿದರು.

★

### ಕನ್ನಡ

ಬೆಂಗಳೂರು— ಕನ್ನಡವು ಜಿಲ್ಲಾ ಮಟ್ಟದಲ್ಲಿ ಆಡಳಿತ ಭಾಷೆಯಾಗಿ ಕೂಡಲೇ ಜಾರಿಗೆ ತರಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್‌ರವರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.–

ವುಡ್‌ಲಾಂಡ್ 2-6-72ರಿಂದ ಆಮೋಘ 5 ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಸಂಡರಿಬಾಲು
ನಿರ್ದೇಶನ: ರಾಶಿ ಸಹೋದರರು ನಿರ್ಮಾಪಕರು: ಎಂ ಜೆ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಟು ಸರ್ ವಿತ್ ಲವ್

ಅಪೂರ್ವ 2 ನೇ ವಾರ

ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ [ ವಯಸ್ಕರಿಗೆ ಮಾತ್ರ ]

ಜರೂರತ್

ಪಾತ್ರ– ರಿನ ರಾಯ್, ವಿಜಯ ಅರೋರ, ಅಸಿತ್ ಸೇನ್, ಮನಮೋಹನ ಕೃಷ್ಣ
ಜಾನಿ ವಿಸ್ಕಿ, ಡಾನಿಡೆಂಜೊಪ್ಪ
ನಿರ್ದೇಶನ– ಬಿ. ಆರ್. ಇಶಾರ ಸಂಗೀತ–ಬ್ರಿಜ್ ಭೂಷಣ್
ದಿನ 3 ಆಟಗಳು

ಅರ್ಜಿಗಳಿಗೆ ಆಹ್ವಾನ : ಮೈಸೂರು ವಿಶ್ವವಿದ್ಯಾನಿಲಯದ ಸ್ವರ್ಣಮಹೋತ್ಸವ ಸಂಬಂಧವಾಗಿ ಕೊಡಲಾಗುವ ಸಂಶೋಧನಾ ಕಾರ್ಯಗಳ ಪಾರಿತೋಷಕಕ್ಕೆ ಆಹ್ವಾನಿಸಲಾಗಿದೆ. 15 ರೊಳಗೆ ರಿಜಿಸ್ಟ್ರಾರ್‌ರವರಿಗೆ ಅರ್ಜಿ ತಲುಪಬೇಕು. ಹೆಚ್ಚಿಗೆ ವಿವರಗಳನ್ನು ಮೈಸೂರು ವಿಶ್ವವಿದ್ಯಾಲಯ ಕಚೇರಿಯಲ್ಲಿ ಪಡೆಯಬಹುದು.

ಮೈಸೂರು ಪಿ.ಡಬ್ಲ್ಯು.ಡಿ

# ಟೆಂಡರ್ ಪ್ರಕಟಣೆ

ನಂ. 10/72-73/ ತಾ. 25 ನೇ ಮೇ 1972

ಈ ಕೆಳಗೆ ಕಂಡ ಕೆಲಸಗಳಿಗಾಗಿ ಕಾಲಂ ನಂಬರು 5 ರಲ್ಲಿ ಸೂಚಿಸಿರುವ ಸೂಕ್ತ ವರ್ಗದ ರಿಜಿಸ್ಟರ್ ಆಗಿರುವ ಮೈಸೂರು ಪಿ.ಡಬ್ಲ್ಯು.ಡಿ. ಕಂಟ್ರಾಕ್ಟರ್‌ಗಳಿಂದ ವಿಧಾಯಕವಾದ ಫಾರಂನಲ್ಲಿ ದ್ವಿಪ್ರತಿಗಳಲ್ಲಿ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ ಮತ್ತು 19-6-1972 ರ ಮಧ್ಯಾಹ್ನ 4 ಗಂಟೆಯ ವರೆಗೆ ಚಾಮರಾಜನಗರದಲ್ಲಿರುವ, ಚಾಮರಾಜನಗರ ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಂದ ಅವು ಸ್ವೀಕರಿಸಲ್ಪಡುವುವು. ಸಾಧ್ಯವಾದರೆ ಅದೇ ತಾರೀಖು, ಹಾಜರಿರ ಬಯಸುವ ಟೆಂಡರ್‌ದಾರರು ಅಥವಾ ಅವರ ಪ್ರತಿನಿಧಿಗಳ ಎದುರು ಅವನ್ನು ಒಡೆಯಲಾಗುವುದು. ಖಾಲಿ ಟೆಂಡರ್ ಫಾರಂಗಳು, ಫಾರಂಗಳ ಮಾರಾಟಕ್ಕೆ ಇಟ್ಟಿರುವ ವಿಧಾಯಕವಾದ ಹಣವನ್ನು (ವಾಪಸ್ಮಾಡಲ್ಪಡದ) ಪಾವತಿ ಮಾಡಿದಲ್ಲಿ 14-6-1972 ರಿಂದ 17-6-1972 ರ ವರೆಗೆ ಕೆಲಸದ ಎಲ್ಲಾ ದಿನಗಳಲ್ಲಿ ಕಚೇರಿ ಕೆಲಸದ ವೇಳೆಗಳಲ್ಲಿ ಕೊಡಲಾಗುವುದು. ಕಾರಣಗಳನ್ನು ಕೊಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ನಿರಾಕರಿಸುವ ಹಕ್ಕು ತಕ್ಕ ಅಧಿಕಾರಿಯವರಿಂದ ಕಾದಿರಿಸಲ್ಪಟ್ಟಿದೆ. ಹೆಚ್ಚಿನ ವಿವರಗಳನ್ನು ಚಾಮರಾಜನಗರದಲ್ಲಿ ಇರುವ ಚಾಮರಾಜನಗರ ವಿಭಾಗದ, ಎಕ್ಸಿಕ್ಯುಟೀವ್ ಇಂಜಿನಿಯರ್‌ರವರ ಕಚೇರಿಯಲ್ಲಿ, ಕೆಲಸದ ಎಲ್ಲಾ ದಿನಗಳಲ್ಲಿ ಕಚೇರಿ ಕೆಲಸದ ವೇಳೆಗಳಲ್ಲಿ ಪಡೆಯಬಹುದು.

| ಸೀ ನಂ | ಕೆಲಸದ ಹೆಸರು | ಟೆಂಡರ್‌ಗೆ ಇಟ್ಟಿರುವ ಅಂದಾಜು ಮೊತ್ತ | ಇ ಎಂ ಡಿ | ಟೆಂಡರ್ ಕೊಡಬಹುದಾದ ಕಂಟ್ರಾಕ್ಟರ್ ವರ್ಗ | ಟೆಂಡರ್ ಫಾರಂ ದರ | ಮಳೆಗಾಲ ಬಿಟ್ಟು ಕೆಲಸ ಮುಗಿಸಲು ಕಾಲಾವಧಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಕೊಳ್ಳೇಗಾಲ ತಾಲ್ಲೂಕಿನ ಶ್ರೀ ಎಂ ಎಂ ಬೆಟ್ಟದಲ್ಲಿ ಆರ್. ಸಿ. ಸಿ. ಮೇಲ್ಚಾವಣಿ ಸಮೇತ ಯಾತ್ರಿಕರ ಷೆಡ್ ನಿರ್ಮಿಸುವುದು. (2 ನೇ ಕಾಲ್) | 62202 | 1555 | 1 ರಿಂದ 3 | 5-15 | 18 ತಿಂಗಳು (ಹದಿನೆಂಟು ತಿಂಗಳು) |
| 2 | ಡಿಟೋ- ದಲ್ಲಿ ರಂಗಸ್ವಾಮಿ ಪೊಡ್ಡು ಹತ್ತಿರ ಗದ್ದಿಗೆಯ ಮೇಲೆ ಮಂಟಪ ನಿರ್ಮಿಸುವುದು (3 ನೇ ಕಾಲ್). | 9900 | 248 | 1 ರಿಂದ 4 | 5-15 | 6 ತಿಂಗಳು (ಆರು) |
| 3 | ಡಿಟೋದಲ್ಲಿ - (ಡಿಟೋದಲ್ಲಿ) ಶೇಷಣ್ಣ ಒಡೆಯರ್ ಗದ್ದಿಗೆಗಾಗಿ ಮಂಟಪ ನಿರ್ಮಿಸುವುದು. | 14900 | 373 | ಡಿಟೋ | 5-15 | ಡಿಟೋ |
| 4 | ಯಳಂದೂರು ತಾಲ್ಲೂಕಿನ ಸಂತೆಮರಹಳ್ಳಿಯಲ್ಲಿ ಒಂದು ಹೆಡ್ ಕಾನ್‌ಸ್ಟೆಬಲ್ ಮತ್ತು ನಾಲ್ಕು ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ ಪೊಲೀಸ್ ಸ್ಟಾಫ್ ಕ್ವಾರ್ಟರ್ಸ್ ನಿರ್ಮಿಸುವುದು (3 ನೇ ಕಾಲ್) | 59000 | 1475 | 1 ರಿಂದ 3 | 5-15 | 15 ತಿಂಗಳು (ಹದಿನೈದು) |
| 5 | ಯಳಂದೂರು ತಾಲ್ಲೂಕಿನ ಬಿ. ಆರ್. ಬೆಟ್ಟದಲ್ಲಿ ಒಂದು ಹೆಡ್ ಕಾನ್‌ಸ್ಟೆಬಲ್ ಮತ್ತು ನಾಲ್ಕು ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ ಪೊಲೀಸ್ ಸ್ಟಾಫ್ ಕ್ವಾರ್ಟರ್ಸ್ ನಿರ್ಮಿಸುವುದು (4 ನೇ ಕಾಲ್) | 74500 | 1860 | ಡಿಟೋ | 5-15 | 18 ತಿಂಗಳು (ಹದಿನೆಂಟು) |
| 6 | ಡಿಟೋ-ಬಿ. ಆರ್. ಬೆಟ್ಟದಲ್ಲಿ ಪೊಲೀಸ್ ಔಟ್ ಪೋಸ್ಟ್ ಕಟ್ಟಡ ನಿರ್ಮಿಸುವುದು | 14050 | 352 | 1 ರಿಂದ 4 | 5-15 | 5 ತಿಂಗಳು (ಐದು) |

ಸಹಿ/- ಕೆ. ಶ್ರೀನಿವಾಸಮೂರ್ತಿ,
ಎಕ್ಸಿಕ್ಯುಟೀವ್ ಇಂಜಿನಿಯರ್, ಚಾಮರಾಜನಗರ ವಿಭಾಗ.

ಸಹಾಯಾರ್ಥ ಪ್ರದರ್ಶನ — ಮೈಸೂರಿನಲ್ಲಿ

ಸರ್ಕಾರಿ ನೌಕರರ ಸಂಘದ ಕಟ್ಟಡದ ಸಹಾಯಾರ್ಥವಾಗಿ ಕ್ಯಾಪರ್ಡ್ ಹಾಲಿನಲ್ಲಿ ಈ ತಿಂಗಳು 11 ನೇ ತಾ. ಭಾನುವಾರ ಸಂಜೆ ಚಿತ್ರಪ್ರಪಂಚದವರಿಂದ ನೃತ್ಯ, ಸಂಗೀತ ಏರ್ಪಾಡಾಗಿದೆ.

ಮಠ ದೇವಾಲಯಗಳ ಭೂಮಿ ಹೋಗಬಹುದು

ಮೈಸೂರು ಮಂತ್ರಿಮಂಡಲ ಕೈಗೊಂಡಿರುವ ತೀರ್ಮಾನದಂತೆ, ಮುತೀಯೆ ಮತ್ತು ದಾನ ಸಂಸ್ಥೆಗಳು ಹೊಂದಿರುವ ಹೆಚ್ಚು ಭೂಹಿಡುವಳಿ ಮೇಲೆ ಅಧಿಕಾರವಹಿಸನ್ನು ಕಳೆದುಕೊಳ್ಳುವುವು ಮಸೀದಿ ಮತ್ತು ಚರ್ಚುಗಳಿಗೆ ವಿನಾಯಿತಿ ಇಲ್ಲ.

★

ಮೈಸೂರು ರಾಜ್ಯದಲ್ಲಿ ಆಯುರ್ವೇದಕ್ಕೆ ಪ್ರತ್ಯೇಕ ಇಲಾಖೆ ತೆಗೆದು ಡೈರೆಕ್ಟರ್ ನೇಮಕ ಮಾಡಲಾಗುವುದು.

## Contribute Liberally to the National Defence Fund

Edited Printedand Published by Dharmapracharanirata M S Krishna Rao ( Propretor ) at the Satyavadi Press Chamarajapuram Mysore 4